ಮುಂಜಾವು

ವಾರಪತ್ರಿಕೆ,

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -೧೯

...ನೇ ವರ್ಷ ೧೪ನೇ ಸಂಚಿಕೆ ಕೊಪ್ಪ ೨-೧೨-೧೯೮೪ ಭಾನುವಾರ ಬೆಲೆ ೪೦ ಪೈಸೆ

ಕ್ಷೇತ್ರ ಮಟ್ಟದಲ್ಲಿ 'ಮತದಾರರ ವೇದಿಕೆ' ರಚನೆಗಾಗಿ

ಕೊಪ್ಪದಲ್ಲಿ ಪೂರ್ವಭಾವಿ ಸಭೆ

ಕೊಪ್ಪ: ೨-೧೨-೮೪ ರಂದು ಬೆ. ೧೧ ಗಂಟೆಗೆ ಇಲ್ಲಿನ ಪುರಭವನದಲ್ಲಿ ಕೊಪ್ಪ ತಾ|| ರೈತ ಸಂಘ ಕ್ಷೇತ್ರಮಟ್ಟದ 'ಮತದಾರರ ವೇದಿಕೆ' ರಚಿಸುವ ಬಗ್ಗೆ ಪೂರ್ವಭಾವಿ ಸಭೆ ಕರೆದಿದೆ. ಈ ಸಭೆಗೆ ರಾಜಕೀಯ ಪಕ್ಷಗಳಿಂದ ಹೊರತಾದ ಎಲ್ಲಾ ಸಂಘಸಂಸ್ಥೆಗಳ, ಯುವಕ-ಯುವತಿ ಸಂಘಗಳ ಪ್ರತಿನಿಧಿಗಳು ಹಾಗೂ ಎಲ್ಲಾ ಆಸಕ್ತ ವ್ಯಕ್ತಿಗಳು ಬಂದು ತಮ್ಮ ಸಲಹೆ-ಸಹಕಾರ ನೀಡಬೇಕೆಂದು ಕೋರಲಾಗಿದೆ.

ಚಿಕ್ಕಮಗಳೂರು ಕ್ಷೇತ್ರಕ್ಕೆ ಚಿಕ್ಕಮಗಳೂರಿನ ವಕೀಲ ಲೋಕೇಶ ಗೌಡ ಅವರು ಮತದಾರರ ವೇದಿಕೆಯ ಅಧಿಕೃತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಚಿಕ್ಕಮಗಳೂರಲ್ಲಿ ಪತ್ರಕರ್ತನ ಮೇಲೆ ಹಲ್ಲೆ; ಪ್ರತಿಭಟನೆ

ಚಿಕ್ಕಮಗಳೂರು: ಇಲ್ಲಿನ 'ಜನಮಿತ್ರ' ದಿನಪತ್ರಿಕೆಯ ವರದಿಗಾರ ದಿನೇಶ್ ಪಟವರ್ಧನ್ ಅವರಿಗೆ ನ. ೨೭ ರಂದು ಅಪರಿಚಿತನೊಬ್ಬ ತೀವ್ರವಾಗಿ ಥಳಿಸಿದ್ದು, ಜಿಲ್ಲಾ ಪತ್ರಕರ್ತರ ಸಂಘ ಇದನ್ನು ಉಗ್ರವಾಗಿ ಖಂಡಿಸಿ, ಹಲ್ಲೆಕೋರನನ್ನು ಪತ್ತೆ ಹಚ್ಚಿ ಶಿಕ್ಷಿಸುವಂತೆ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳನ್ನು ಒತ್ತಾಯಿಸಿದೆ.

ನಲ್ಲಿಯ ಮೀಟರಿಗೆ ಮತ್ತೊಮ್ಮೆ ಸೋಲು!

ಕೊಪ್ಪ: ಇಲ್ಲಿನ ಪುರಸಭೆ ನಲ್ಲಿಗಳಿಗೆ ಅಳವಡಿಸಲು (ಈ ಬಾರಿ ಬಾಡಿಗೆ ಮನೆಗಳಿಗೆ ಮಾತ್ರ) ಯೋಚಿಸಿದ್ದ ಮೀಟರಿಗೆ ನ. ೨೯ ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ಈ ಹಿಂದಿನ ವರ್ಷಗಳಲ್ಲಿ ಆದಂತೆ ಮತ್ತೊಮ್ಮೆ ಸೋಲುಂಟಾಯಿತು.

ಶುದ್ಧೀಕರಿಸಿದ ನೀರು ಒದಗಿಸಿ, ಇನ್ನೂ ಹೆಚ್ಚು ಹೊತ್ತು ನೀರು ಬರುವಂತೆ ವ್ಯವಸ್ಥೆ ಮಾಡದೆ ಮೀಟರು ಅಳವಡಿಸುವುದಕ್ಕೆ ನಾಗರಿಕರ ತೀವ್ರ ವಿರೋಧವಿರುವುದನ್ನು ಇಲ್ಲಿ ಸ್ಮರಿಸಬಹುದು. ಈ ಬಾರಿ ನಿರ್ಧಾರ ಕಾರ್ಯಗತವಾದಲ್ಲಿ ಮೀಟರನ್ನು ನ್ಯಾಯಾಲಯದ ಕಟ್ಟೆ ಹತ್ತಿಸಲೂ ಕೆಲವು ನಾಗರಿಕರು ಸನ್ನದ್ಧರಾಗಿದ್ದರೆನ್ನಲಾಗಿದೆ.

ಜನತಾದ ಅಭ್ಯರ್ಥಿ ಶಂಕರ್ ಕಡೇ ಗಳಿಗೆಯಲ್ಲಿ ನಿರ್ಗಮನ:

ಚಿಕ್ಕಮಗಳೂರ ಕಣಕ್ಕೆ ೧೧ ಜನ

ಚಿಕ್ಕಮಗಳೂರು: ಡಿ. ೨೪ರಂದು ಲೋಕಸಭೆಗೆ ನಡೆಯಲಿರುವ ಚುನಾವಣೆಗಾಗಿ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಿಕೆ ನ. ೩೦ ರಂದು ಮುಗಿದಿದ್ದು, ಈಗ ಈ ಕಣದಲ್ಲಿ ಒಟ್ಟು ೧೧ ಮಂದಿ ಅಭ್ಯರ್ಥಿಗಳಿದ್ದಾರೆ.

ನಾಮಪತ್ರ ಹಿಂತೆಗೆದುಕೊಳ್ಳುವಿಕೆ ಮುಕ್ತಾಯವಾಗುವ ಕೆಲವೇ ನಿಮಿಷಗಳ ಮುಂಚೆ ಜನತಾದ ಬಿ.ಎಲ್.ಶಂಕರ್ ಅನಿರೀಕ್ಷಿತವಾಗಿ ತಮ್ಮ ಉಮೇದುವಾರಿಕೆ ಹಿಂತೆಗೆದುಕೊಂಡರು. ಅಲ್ಲದೆ ಸಂಜಯ್ ಮಂಚದ ಹಲಸೇ ಭೈರೇಗೌಡ ಮತ್ತು ಇತರ ೧೯ ಜನ ಪಕ್ಷೇತರರೂ ನಾಮಪತ್ರಗಳನ್ನು ಹಿಂತೆಗೆದುಕೊಂಡರು.

ಈಗ ಸ್ಪರ್ಧೆಯಲ್ಲಿರುವವರು : ಲೋಕೇಶಗೌಡ ("ಮತದಾರರ ವೇದಿಕೆ), ಡಿ.ಕೆ.ತಾರಾದೇವಿ (ಕಾಂಗ್ರೆಸ್), ಬಿ.ಕೆ.ಸುಂದರೇಶ್ (ಸಿ.ಪಿ.ಐ.), ಸಿ.ಎಂ.ಎಸ್.ಶಾಸ್ತ್ರಿ (ದ ಸಂ.ಕಿ.ಪ) ಹಾಗೂ ೭ ಪಕ್ಷೇತರರು.

ಜನಸಾಮಾನ್ಯರಲ್ಲಿ ಚುನಾವಣೆಯ ಬಗ್ಗೆ ನಿರಾಸಕ್ತಿ ಈ ಬಾರಿ ಹಿಂದೆಂದಿಗಿಂತಲೂ ಅತ್ಯಧಿಕವಾಗಿದ್ದು, ಸದ್ಯದ ಪರಿಸ್ಥಿತಿ ಗಮನಿಸಿದರೆ ಕಾಂಗ್ರೆಸ್ ಗೆಲ್ಲುವ ಸಾಧ್ಯತೆ ನಿಚ್ಚಳವಾಗಿದೆ.

ಈ ಮಧ್ಯೆ, ಡಿ.೧೬ರಂದು ದೇಶದ ನೂತನ ಪ್ರಧಾನಿ ರಾಜೀವ್ ಗಾಂಧಿ ಕ್ಷೇತ್ರಕ್ಕೆ ಭೇಟಿ ನೀಡಿ ಚುನಾವಣಾ ಪ್ರಚಾರ ಮಾಡಲಿರುವುದಾಗಿ ವರದಿಯಾಗಿದೆ.

ಪತ್ರಿಕೆ ಕಚೇರಿ ಸ್ಥಳಾಂತರ

ನಮ್ಮ ಪತ್ರಿಕಾ ಕಛೇರಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬಳಿಗೆ ಸ್ಥಳಾಂತರಿಸಿದ್ದೇವೆ. ಇದೇ ಕಾರಣಕ್ಕೆ ನಮ್ಮ ೨೫-೧೧-೮೪ರ ಸಂಚಿಕೆ ಪ್ರಕಟವಾಗಲಿಲ್ಲ. —ಸಂ.

ಗ್ರಾಮಸ್ಥರ ರಸ್ತೆಗೆ ಪ್ರಭಾವಿ ಅಡ್ಡಿ

(ವರದಿ: ಬಿ. ಎಸ್. ಶೇಷಾದ್ರಿ)

ಬೆಳವಿನಕೊಡಿಗೆ: ಗ್ರಾಮೀಣ ನಿರುದ್ಯೋಗಿಗಳಿಗೆ ವರ್ಷಕ್ಕೆ ಕನಿಷ್ಠ ೧೦೦ ದಿನ ಉದ್ಯೋಗ ದೊರಕಿಸುವ ಉದ್ದೇಶ ಹೊಂದಿದ ಎನ್. ಆರ್. ಇ. ಪಿ. ಯೋಜನೆಯಾಗಿ ಕಾರ್ಯರೂಪಕ್ಕೆ ಬರುವ ಬದಲು ಇಲಾಖಾ ಇಂಜಿನಿಯರ್ ಹಾಗೂ ಸ್ಥಳೀಯ ಕಂಟ್ರಾಕ್ಟರೊಬ್ಬರ ಜೋಬು ತುಂಬಿಸುವ ಯೋಜನೆಯಾಗಿ ಕಾರ್ಯರೂಪಕ್ಕೆ ಬಂದ ಯೋಜನೆಯೊಂದು ಈಗ ಸ್ಥಳೀಯ ಪ್ರಭಾವಿಯೊಬ್ಬರ ದುಷ್ಟತನದಿಂದಾಗಿ ಗ್ರಾಮಸ್ಥರನ್ನು ಪೂರ್ತಿ ಕಂಗೆಡಿಸಿದೆ. (ರಸ್ತೆ ತುಂಬ ಹೊಂಡಿಗಳು, ಅನವಶ್ಯ ನಿರ್ಮಿಸಿದ ಮೋರಿಗಳು ಈ ರಸ್ತೆಯ ಉದ್ದೇಶವನ್ನು ವಿವರಿಸುತ್ತವೆ.

ಭುವನಕೋಟೆಗೆ ಬರುವ ೧.೫ ಕಿ.ಮೀ. ರಸ್ತೆಯೊಂದು ೮೩-೮೪ ರಲ್ಲಿ ೪೨ ಸಾವಿರ ರೂ. ವೆಚ್ಚದಲ್ಲಿ ಕಾರ್ಯಗತವಾಯಿತು. ಆದರೆ ಇದರಿಂದ, ಹಿಂದೆ ಚೆನ್ನಾಗಿದ್ದ ಪಂಚಾಯ್ತಿ ರಸ್ತೆಗೆ ಸಂಪರ್ಕ ಕಡಿಯಿತು. ಹಳೆ ರಸ್ತೆಗೂ ಹೊಸ ರಸ್ತೆಗೂ ಗ್ರಾಮಸ್ಥರೇ ಸಂಪರ್ಕ ಕಲ್ಪಿಸಲು ಪ್ರಯತ್ನ ಪಟ್ಟಾಗ, ಸ್ಥಳೀಯ ಶ್ರೀಮಂತರೊಬ್ಬರು ಅದಕ್ಕೆ ಅಡ್ಡಲಾಗಿ (ಜಾಗ ತಮಗೆ ಸೇರಿದ್ದೆಂದು ಹೇಳಿ) ಚಿಗುರು ಗೂಟ ನೆಟ್ಟು, ಹಳ್ಳಿಗರಿಗೆ ಜಮೀನು ಮತ್ತು ಮಾರುಕಟ್ಟೆಗೆ ಸಾಗಣೆಯ ಮಾರ್ಗವನ್ನೇ ಮುಚ್ಚಿದ್ದಾರೆ.

ಕಂಟ್ರಾಕ್ಟರ್, ಇಂಜಿನಿಯರ್ ಮತ್ತು ಸದರಿ ಶ್ರೀಮಂತರ ಬಗೆಗಿನ ಈ ಎಲ್ಲಾ ಮಾತುಗಳ ಸತ್ಯಾಂಶ ತಿಳಿಯಬೇಕಿದ್ದವರು ಒಮ್ಮೆ ಇಲ್ಲಿಗೆ ಭೇಟಿ ಕೊಡಬೇಕು.

ಧನ್ವಂತರಿ ಆಸ್ಪತ್ರೆಯಲ್ಲಿ ಸ್ತ್ರೀ ರೋಗ ತಜ್ಞರು

ಶೃಂಗೇರಿ: ಇಲ್ಲಿನ ಶಾರದಾ ಧನ್ವಂತರಿ ಆಸ್ಪತ್ರೆಯಲ್ಲಿ ಇಂಗ್ಲೆಂಡಿನಿಂದ ಬಂದಿರುವ ಸ್ತ್ರೀ ರೋಗ ತಜ್ಞ ಡಾ|| ಜನಾರ್ಧನ ಅಂಕೋಲ್‌ಕರ್ ಒಂದು ತಿಂಗಳಿಂದ ತಂಗಿದ್ದಾರೆ. ಇವರು ಮೂರು ತಿಂಗಳು ಇಲ್ಲೇ ಇರುತ್ತಾರೆಂದು ತಿಳಿದು ಬಂದಿದೆ. ಸುತ್ತ ಮುತ್ತಲ ಜನತೆ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು.

ದರೋಡೆ: ಶ್ವಾನದಳಕ್ಕೂ ಸುಳಿವು ಸಿಗಲಿಲ್ಲ

ಕೊಪ್ಪ: ಇಲ್ಲಿನ ಒಬ್ಬ ಪ್ರಮುಖ ವ್ಯಾಪಾರಿಗಳಾದ ಎಂ ಹೆಚ್. ಎಂ. ಅಂಡ್ ಕಂಪನಿಯವರಲ್ಲಿ ನ.೨೭ ರ ರಾತ್ರಿ ಮದುವೆಗೆಂದು ತೆಗೆದಿಟ್ಟಿದ್ದ ಹಲವು ಸಾವಿರ ರೂ.ಗಳ ಜವಳಿ ಕಳವಾಗಿದ್ದು, ನ. ೨೯ರ ಸಂಜೆ ಹಾಸನದಿಂದ ಕರೆತರಲಾದ ಪೋಲೀಸ್ ಪತ್ತೇದಾರಿ ನಾಯಿಗೆ ಸಹ ಯಾವುದೇ ಸುಳಿವು ಸಿಗಲಿಲ್ಲವೆಂದು ತಿಳಿದುಬಂದಿದೆ. ಕೊಪ್ಪ ಪೋಲೀಸರು ತನಿಖೆ ಮುಂದುವರಿಸಿದ್ದಾರೆ. ಇದು ಈ ಅಂಗಡಿಯಲ್ಲಿ ಈ ಎರಡು ತಿಂಗಳಲ್ಲಿ ೨ ನೆಯ ಕಳ್ಳತನವಾಗಿದೆ.

ಅ.ಭಾ.ವಿ.ಪ. ಆಶ್ರಯದ ಜಿಲ್ಲಾ ಅಂತರ ಕಾಲೇಜು ಭಾವಗೀತೆ, ಚರ್ಚಾಸ್ಪರ್ಧೆ

ಕೊಪ್ಪ: ಇಲ್ಲಿನ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಶಾಖೆ ಜಿಲ್ಲಾ ಮಟ್ಟದ ಅಂತರ ಕಾಲೇಜು ಭಾವಗೀತೆ, ಜನಪದ ಗೀತೆ ಮತ್ತು ಚರ್ಚಾ ಸ್ಪರ್ಧೆಗಳನ್ನು ಡಿ. ೧ ರಂದು ಪುರಭವನದಲ್ಲಿ ಏರ್ಪಡಿಸಿದೆ. ಚರ್ಚಾ ಸ್ಪರ್ಧೆಯ ವಿಷಯ: "ಇಂದಿನ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಸಂಘ ಮತ್ತು ಚುನಾವಣೆಯ ಅವಶ್ಯಕತೆ".

ಕೊಪ್ಪ ಕ.ವಿ.ಮಂ: ಖಾಯಂ ಅಧಿಕಾರಿಯಿಲ್ಲದೆ ತೊಂದರೆ

ಕೊಪ್ಪ: ವಿದ್ಯುಚ್ಛಕ್ತಿ ಇಲಾಖೆಯ ಇಲ್ಲಿನ ಸೆಕ್ಷನ್‌ಗೆ ಈಗ್ಗೆ ಸುಮಾರು ಏಳೆಂಟು ತಿಂಗಳಿಂದಲೂ ಖಾಯಂ ಅಧಿಕಾರಿಯಿಲ್ಲದೆ, ಇಲಾಖೆಯ ಕೆಲಸಗಳಿಗೂ ಅಡ್ಡಿಯಾಗಿದೆ, ವಿದ್ಯುತ್ ಬಳಕೆದಾರರ ಪರಿಸ್ಥಿತಿಯಂತೂ ವರ್ಣಿಸಲಾಗದಷ್ಟು ಅಧೋಗತಿ ಮುಟ್ಟಿದೆ.

ಇಲ್ಲಿದ್ದ ಸಹಾಯಕ ಇಂಜಿನಿಯರ್ ಅಂಜನಾಮೂರ್ತಿ ಅವರಿಗೆ ವರ್ಗವಾದ ನಂತರ ಬಂದಿದ್ದ ಅಧಿಕಾರಿ ಬೇಗನೆ ಬೇರೆ ಕಡೆಗೆ ವರ್ಗ ಮಾಡಿಸಿಕೊಂಡರು. ಮತ್ತೊಬ್ಬರಿಗೆ ಇಲ್ಲಿಗೆ ನಿಯುಕ್ತಿಯಾದಾಗ ಅವರು ಬಂದು ಊರು ನೋಡಿ ಹಿಂದೆ ಹೋದವರು ಮತ್ತೆ ಇತ್ತ ಕಡೆ ಮುಖ ಹಾಕಲಿಲ್ಲ.

ಈಗ ಬಾಳೆಹೊನ್ನೂರಿನಿಂದ ಹಂಗಾಮಿಯಾಗಿ ಒಬ್ಬೊಬ್ಬರು ಜೂನಿಯರ್ ಇಂಜಿನಿಯರ್‌ಗಳು ಬಂದು ಹೋಗಿ ಮಾಡುತ್ತಾ ತೀರ ತುರ್ತಿನ ಕೆಲಸಗಳನ್ನಷ್ಟು ಹೇಗೋ ತಳ್ಳುತ್ತಿದ್ದಾರೆ. ಇದರಿಂದ ಕಚೇರಿಯ ಕೆಲಸ ಕುಂಠಿತ, ಇಲಾಖೆಗೂ ಹಾನಿ. ಅದಕ್ಕಿಂತ ಹೆಚ್ಚಾಗಿ ವಿದ್ಯುತ್ ಬಳಕೆದಾರರಿಗೆ ಎಲ್ಲಿಲ್ಲದ ತೊಂದರೆಯಾಗಿದೆ.

ಮೇಲಧಿಕಾರಿಗಳು ತಕ್ಷಣ ಒಬ್ಬರು ಖಾಯಂ ಸ|| ಇಂ|| ರನ್ನು ಇಲ್ಲಿಗೆ ನೇಮಕ ಮಾಡಿ, ಜನರ ಕಷ್ಟ ನಿವಾರಿಸಬೇಕಾಗಿದೆ.

ಸದ್ಯದಲ್ಲೇ ಇಲ್ಲಿ ಸ್ವಿಚಿಂಗ್ ಸಬ್ ಸ್ಟೇಶನ್ ಕಾರ್ಯಾರಂಭ ಮಾಡಲಿದ್ದು, ಇದರಿಂದ ಪದೇ ಪದೇ ವಿದ್ಯುತ್ ಸರಬರಾಜು ಕಡಿತಗೊಳ್ಳುವುದು ತಪ್ಪುವುದಲ್ಲದೆ ವೋಲ್ಟೇಜ್ ಕೂಡ ಸ್ಥಿರವಾಗಿರುವುದೆಂದು ಹೇಳಲಾಗಿದೆ. ಆದರೆ, ಈಗ ಇರುವ ಖಾಲಿ ಸ್ಥಾನವನ್ನೇ ಇಷ್ಟು ದಿನದಿಂದ ತುಂಬಲಾಗದ ಮೇಲಧಿಕಾರಿಗಳು ಈ ಹೊಸ ಸ್ಥಾನಕ್ಕೊಬ್ಬ ಅಧಿಕಾರಿ(ಜೂ. ಇಂ.)ಯನ್ನು ನೇಮಕ ಮಾಡಬಲ್ಲರೆ ? ಎಂಬ ಅನುಮಾನ ಜನರಲ್ಲಿದೆ.

ಉಪವಿಭಾಗ ಆಗಲಿ

ಕೊಪ್ಪ ಸೆಕ್ಷನ್ನನ್ನು ಒಂದು ಉಪ ವಿಭಾಗದ ದರ್ಜೆಗೆ ಏರಿಸಬೇಕೆಂಬ ಬೇಡಿಕೆಯೂ ಬಹಳ ಕಾಲದಿಂದ ಇದೆ. ಜಯಪುರದಲ್ಲಿ ಈಗಾಗಲೇ ಒಂದು ಪ್ರತ್ಯೇಕ ಸೆಕ್ಷನ್ ಆರಂಭಿಸಲಾಗಿದ್ದು, ಹರಿಹರಪುರಕ್ಕೆ ಕೂಡ ಒಂದು ಸೆಕ್ಷನ್ ಹೊಂದುವಷ್ಟು ಕ್ಷಮತೆ ಇದೆಯೆನ್ನಲಾಗಿದೆ. ಇದೆಲ್ಲ ಒಟ್ಟು ಸೇರಿಸಿ ಕೊಪ್ಪಕ್ಕೆ ಒಂದು ಪ್ರತ್ಯೇಕ ಉಪವಿಭಾಗ ಕಚೇರಿಯತ್ತ ಇಲಾಖೆ ತೀವ್ರ ಗಮನ ಕೊಡಬೇಕಾಗಿದೆ.

ಮುಖ್ಯವಾಗಿ, ಎಲ್ಲದಕ್ಕೂ ಸಿಬ್ಬಂದಿಯ ಕೊರತೆ ತೀವ್ರವಾಗದಂತೆ ನೋಡಲು ನೋಡಿಕೊಳ್ಳಬೇಕು.

ಶಿವಮೊಗ್ಗ ಅಡಿಕೆ ಧಾರಣೆ

ತಾ|| ೩೦-೧೧-೧೯೮೪.

ಸರಕು: ೨೪೬೦ – ೩೩೭೦

ಮಲೆನಾಡು ಮುಳುಗಡೆ ಯೋಜನೆಗಳು ಬೇಡ

ಭದ್ರಾ ಮೇಲ್ದಂಡೆ ಯೋಜನೆಯನ್ನು ವಿರೋಧಿಸುವ ನಮ್ಮ ಜಿಲ್ಲೆಯವರ ಪ್ರಯತ್ನಗಳು ಈಗ ಹೆಚ್ಚು ಸಂಘಟಿತ ರೂಪ ಪಡೆಯುತ್ತಿವೆ. ಇದಕ್ಕೆ ನ. ೧೭ ರಂದು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಕಚೇರಿ ಯೆದುರು ನಡೆದ ಸಾಂಕೇತಿಕ ಧರಣಿ ನಾಂದಿ ಹಾಡಿದೆ. ಯೋಜನೆಗೆ ವಿರೋಧವನ್ನು ಪುನರಾರಂಭಿಸಿದ (ಹಿಂದೆ ಕಳೆದಲ್ಲಿ ವಿರೋಧ ಶುರುವಾಗಿ ನಿಂತು ಹೋಗಿತ್ತು) 'ಭದ್ರಾ ಮೇಲ್ದಂಡೆ ಯೋಜನೆ ವಿರೋಧಿಗಳ ಒಕ್ಕೂಟ'ದ ತಾತ್ಕಾಲಿಕ ಸ್ವರೂಪವನ್ನು ತೊಡೆದು, ಅದನ್ನು ಇಡೀ ಜಿಲ್ಲೆಯನ್ನು ಪ್ರತಿನಿಧಿಸುವ ಒಂದು ಸುಬದ್ಧ ಸಂಘಟನೆಯನ್ನಾಗಿ ಕಟ್ಟುವ ಕೆಲಸ ಶುರುವಾಗಿದೆ.

ಈ ದಿಕ್ಕಿನಲ್ಲಿ ಪತ್ರಕರ್ತ ಶ್ರೀ ಬಿ.ಎಸ್. ವಿದ್ಯಾನಂದ ಭಟ್ ಅವರನ್ನು ಒಕ್ಕೂಟದ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆರಿಸಲಾಗಿದೆ. ಇನ್ನುಳಿದ ಪದಾಧಿಕಾರಿಗಳ ಆಯ್ಕೆ ಮತ್ತು ಕಾರ್ಯಕಾರಿ ಮಂಡಳಿಯ ರಚನೆ ಸದ್ಯದಲ್ಲೇ ಆಗಲಿದೆ. ಇದಕ್ಕೆ ಜಿಲ್ಲೆಯ ವಿವಿಧ ಭಾಗಗಳಿಂದ ಇನ್ನೂ ಹೆಚ್ಚೆಚ್ಚು ಜನ ಉತ್ಸಾಹಿ ಪ್ರತಿನಿಧಿಗಳು ಮುಂದೆ ಬರಬೇಕು.

ವಿರೋಧ ಏಕೆ?

ನ. ರಾ. ಪುರ ತಾ|| ಮಾಗುಂಡಿಯ ಬಳಿ ಕಟ್ಟಲಾಗುವ ಈ ಆಣೆಕಟ್ಟಿನಿಂದಾಗುವ ವಿನಾಶದ ಪಟ್ಟಿ ಬಹಳ ಉದ್ದವಾಗಿದೆ. ಮೊಟ್ಟಮೊದಲನೆಯದಾಗಿ, ಆಣೆಕಟ್ಟು ನಿರ್ಮಾಣವಾದರೆ ತಲೆ ತಲಾಂತರದಿಂದ ಆಶ್ರಯಿಸಿಕೊಂಡು ಬಂದ ತೋಟ, ಗದ್ದೆಗಳು ಮುಳುಗಡೆಯಾಗಿ ಸಾವಿರಾರು ಸಂಸಾರಗಳು ನೆಲೆ ಕಳೆದುಕೊಂಡು 'ಪರದೇಶಿ' ಗಳಾಗಬೇಕಾಗುತ್ತದೆ. ಅವರಿಗೆ ಅಕಸ್ಮಾತ್ ಬೇರೆ ಕಡೆ ಪುನರ್ವ್ಯವಸ್ಥೆ ಕಲ್ಪಿಸಿದರೂ ಅವರ ಮೂಲ ಸಾಂಸ್ಕೃತಿಕ ಸಂಬಂಧಗಳೆಲ್ಲ ಕಡಿದು ಹೋ[...]ಗಿ, ಸಂಪೂರ್ಣ ಹೊಸತಾದ ಯಾವುದೋ ಪ್ರದೇಶದಲ್ಲಿ 'ಪರಕೀಯ'ರಾಗಿ ಸೇರಿಕೊಂ[...]ಡು ಮುಂದಿನ (ಮುಂದಿನ ಪೀಳಿಗೆಗ[...] ಕೂಡ) ಬಾಳಿನುದ್ದಕ್ಕೂ ಅಭದ್ರತೆ ಅನು[...]ವಿಸಬೇಕಾಗುತ್ತದೆ. ಇನ್ನು, ಪರಿಹಾರ ಕೊ[...]ಡುವ ವಿಷಯದಲ್ಲಂತೂ ಈವರೆಗಿನ ಯೋ[...]ಜನೆಗಳಲ್ಲಿ ನಡೆದ ವಿದ್ಯಮಾನ ನೋಡಿದ[...] ಸಾಕು.

ಪರಿಸರಕ್ಕಾಗುವ ಧಕ್ಕೆಯಂತೂ ಅಪಾ[...]

(೩ ನೇ ಪುಟ ನೋಡಿ)

"ಕಾಮಧೇನು" ಸಗಣಿ ಅನಿಲ ಘಟಕ

ಮಾನವನು ತನ್ನ ಇಂಧನದ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಸತತವಾದ ಆವಿಷ್ಕಾರಗಳನ್ನು ನಡೆಸುತ್ತಲೇ ಬಂದಿದ್ದಾನೆ. ಹೊಸ ಹೊಸ ಸಂಶೋಧನೆಗಳು ತನ್ನ ಬೇಡಿಕೆಯನ್ನು ಪೂರೈಸಿದಾಗ್ಯೂ ಅದರಲ್ಲಿರುವ ನ್ಯೂನತೆ–ಕೊರತೆಗಳು ಮುಂದೆಯೂ ಸಂಶೋಧನೆಗಳನ್ನು ನಡೆಸಲು ದಾರಿ ಮಾಡಿ ಕೊಟ್ಟಿವೆ.

ಹೀಗೆ ಕಟ್ಟಿಗೆ, ಕಲ್ಲಿದ್ದಲು, ಪೆಟ್ರೋಲು ಮತ್ತು ವಿದ್ಯುತ್ತು ಮನುಷ್ಯನ ಇಂಧನದ ಅಗತ್ಯವನ್ನು ಪೂರೈಸದಾದಾಗ ಸುಲಭೋಪಾಯದ ಗೋವಿನ ಸಗಣಿಯಿಂದ ಉತ್ಪತ್ತಿಯಾಗುವ ಮೀಥೇನ್ ಅನಿಲವು ಬದಲಿ ವ್ಯವಸ್ಥೆಯಾಗಿ ಉಪಯೋಗಿಸಲ್ಪಟ್ಟಿತು. ಈ ಅನಿಲವನ್ನು ಸಂಗ್ರಹಿಸುವ ಸ್ಥಾವರವೇ "ಸಗಣಿ ಅನಿಲ ಸಾವರ". ಈಗ ಮನುಷ್ಯ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸೌರಶಕ್ತಿಯನ್ನು ತನ್ನ ಅವಶ್ಯಕತೆಗಳಿಗೆ ಬಳಸಿದ್ದಾನೆ.


ಸಗಣಿ ಅನಿಲ ಘಟಕಗಳು

ಎಲ್ಲರೂ ತಿಳಿದಂತೆ, ಸಗಣಿ ಅನಿಲ ಘಟಕ ಗಳಲ್ಲಿ ಮುಖ್ಯವಾಗಿ ಕಡಾಯಿ ಮಾದರಿ ಹಾಗೂ ಗೊಮ್ಮಟ ಮಾದರಿ ಎಂಬ ಎರಡು ವಿಧಗಳಿವೆ. ಖಾದಿ ಗ್ರಾಮೋದ್ಯೋಗ ಆಯೋಗದಿಂದ ರಚಿಸಲ್ಪಟ್ಟ ಕಡಾಯಿ ಮಾದರಿಯು ಬಹು ಕಾಲದಿಂದ ಬಳಕೆಯಲ್ಲಿದ್ದು, ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದವರ ಆವಿಷ್ಕಾರದಿಂದ ಗುಮ್ಮಟ ಮಾದರಿಯು ಇತ್ತೀಚಿನ ವರ್ಷಗಳಲ್ಲಿ ಬಳಸಲ್ಪಟ್ಟಿದೆ.

ಆದರೆ ಈ ಎರಡೂ ಮಾದರಿಗಳನ್ನು ಕಟ್ಟುವುದು ದುಬಾರಿಯಾಗುತ್ತದೆ. ಆರೇಳು ಜನರ ಅಡುಗೆಯ ಅನಿಲ ಉತ್ಪಾದಿಸುವ ಘಟಕ ಕಟ್ಟಲು ಎಂಟೊಂಬತ್ತು ಸಾವಿರ ರೂಪಾಯಿವರೆಗೆ ವೆಚ್ಚ ತಗಲುತ್ತದೆ. ಅಲ್ಲದೆ ಸಿಮೆಂಟ್ ವಿಪರೀತ ಬೇಕಾಗುತ್ತದೆ. ಈ ಸಮಸ್ಯೆಯನ್ನೇ ಸದಾ ಚಿಂತಿಸುತ್ತಿದ್ದ ಸಾಗರದ ಶ್ರೀ ಮಡಸೂರು ರಾಮಚಂದ್ರ ಎಂಬವರು ಮೇಲ್ಕಂಡ ಮಾದರಿಗಳ ತಾತ್ವಿಕ ಹಿನ್ನೆಲೆಯನ್ನೇ ಆಧರಿಸಿ ಹೊಸದಾದ ಮಾದರಿಯನ್ನು ವಿನ್ಯಾಸಗೊಳಿಸಿ ಕಟ್ಟಿ ಯಶಸ್ವಿಯಾಗಿದ್ದಾರೆ. ಇವರು ಸಾಗರ ಅಡಿಕೆ ಬೆಳೆಗಾರರ ಸಂಘದಲ್ಲಿ ಕರಣಿಕರಾಗಿದ್ದಾರೆ.

ಇವರು ತಯಾರಿಸಿದ ಮಾದರಿಯಲ್ಲಿ ಕಡಾಯಿಯಾಗಲೀ ಗುಮ್ಮಟವಾಗಲೀ ಇಲ್ಲ. ಮಣ್ಣಿನ ಬಾನಿಗಳೇ ಅನಿಲ ಸಂಗ್ರಹಿಸುವ ಕಡಾಯಿಗಳು. ಪಚನ ತೊಟ್ಟಿ ಕಟ್ಟಲು ಮಾತ್ರ ಸಿಮೆಂಟಿನ ಉಪಯೋಗ ಈಗಾಗಲೇ ಬಳಕೆಯಲ್ಲಿರುವ ಘಟಕಗಳ ಹೊರತಾದ ತಾಂತ್ರಿಕತೆಯೇನೂ ಇಲ್ಲ ಇದನ್ನು ಸಾಂಕೇತಿಕವಾಗಿ "ಕಾಮಧೇನು" ಸಗಣಿ ಅನಿಲ ಘಟಕವೆಂದು ಹೆಸರಿಸಿದ್ದಾರೆ. ಈ ಘಟಕವನ್ನು ಸರಕಾರ ಗುರುತಿಸಿ "ಮಾನ್ಯ" ಮಾಡಿಲ್ಲವಾದುದರಿಂದ ಸರಕಾರದ ರಿಯಾಯ್ತಿ ಸಿಗುತ್ತಿಲ್ಲ.

ಸಾಮಗ್ರಿಗಳ ವಿವರ	ಪ್ರಮಾಣ	ಅಂದಾಜು ವೆಚ್ಚ ರೂ.
ಇಟ್ಟಿಗೆಗಳು	3300	(4000.00
(ಕಲ್ಲು ಆದರೆ)	(1200)	(800.00)
3' ಎತ್ತರ 22" ವ್ಯಾಸದ ಮಣ್ಣಿನ ಬಾನಿಗಳು (ತಳದಲ್ಲಿ 1/2" ವ್ಯಾಸದ ರಂಧ್ರವಿರಬೇಕು)	16	320.00
ಸಿಮೆಂಟು	12 ಮೂಟೆ	800.00
8' ಉದ್ದದ ಕಲ್ಲುಕಂಬ	2	150.00
ಜೇಬಿ ಜಲ್ಲಿ	2–1/2 ಗಜ	100.00
ಮರಳು	1 ಲಾರಿ	150.00
8' ಉದ್ದ, 6" ವ್ಯಾಸದ ಸಿಮೆಂಟ್ ಪೈಪು	2	100.00
5-1/2' ಅಗಲ, 16' ಉದ್ದದ ಜಾಲರಿ	1	150.00
ಗುಂಡಿ ತೆಗೆಯುವುದು ಮತ್ತು ಕಟ್ಟುವ ಕೂಲಿ		1300.00
(ಅನಿಲ ಸಾಗಿಸುವ ನಳಿಕೆ, ಒಲೆ ಮುಂತಾದುವು ಎಲ್ಲಾ ಘಟಕಗಳಿಗೂ ಬೇಕಾದ್ದರಿಂದ ಇಲ್ಲಿ ಸೇರಿಸಿಲ್ಲ)	ಮೊತ್ತ	3470.00



(1) ಒಳಬಾಯಿ (2) ಬಗ್ಗಡ ಒಳ ಹೋಗುವ ನಳಿಕೆ (3) 9' ಆಳದ ತೊಟ್ಟಿ ಗೋ[...] (4) 5' ಎತ್ತರದ ಮಧ್ಯಂತರ ಗೋಡೆ. (5) ಹೊರ ಬಾಯಿ ಬಗ್ಗಡದ ನಳಿ[...] (6) ಅರ್ಧ ಅಡಿ ದಪ್ಪದ ಪಂಚಾಂಗ (ಬೆಡ್) (7) ಬಾನಿಗಳು. (8) ಅನಿಲ ಧಾರ[...] ನಳಿಕೆಗಳು (9) ಹೊರ ಬಾಯಿ

ಬೇಕಾದ ಸಾಮಗ್ರಿಗಳು

ಹತ್ತು ಜನರಿಗೆ ಅಡುಗೆ ಮಾಡಲು ಬೇಕಾಗುವಷ್ಟು ಅನಿಲ ಉತ್ಪಾದಿಸುವ ಘಟಕ ಕಟ್ಟಲು ಬೇಕಾದ ಸಾಮಗ್ರಿಗಳು ಹಾಗೂ ಅಂದಾಜು ವೆಚ್ಚವನ್ನು ಕೆಳಗೆ ಕೊಡಲಾಗಿದೆ.

ಕಟ್ಟುವ ವಿಧಾನ

ಹದಿನೈದು ಅಡಿಗಿಂತ ಆಳದಲ್ಲಿ ಜಲ ಮಟ್ಟವಿರುವ, ಅಡಿಗೆ ಮನೆಯಿಂದ ಎಪ್ಪತ್ತು ಅಡಿಗಿಂತ ಜಾಸ್ತಿ ದೂರವಿಲ್ಲದ, ಜಾನುವಾರು ಕೊಟ್ಟಿಗೆಗೆ ಹತ್ತಿರವಿರುವ ಸ್ಥಳವನ್ನು ಆಯ್ಕೆಮಾಡುವುದು. ಸುತ್ತ ಹಾಲುವಾಣ, ಗೋಳಿಯಂತಹ ಮರಗಳಿರದಂತೆ ನೋಡಿಕೊಳ್ಳುವುದರಿಂದ ಮುಂದೆ ಅವುಗಳ ಬೇರುಗಳು ಘಟಕಕ್ಕೆ ತೊಂದರೆ ಕೊಡುವುದಿಲ್ಲ.

೯–೧/೨' ಆಳ, ೭–೧/೨' ಅಗಲ ೧೭–೧/೨' ಉದ್ದದ ಚೌಕಾಕೃತಿ ಗುಂಡಿ ತೆಗೆಯುವುದು. ೧/೨' ದಪ್ಪದ ಪಂಚಾಂಗ (ಬೆಡ್) ಹಾಕುವುದು. ಅದರ ಮೇಲೆ ಒಂದು ಅಡಿ ದಪ್ಪದ ಇಟ್ಟಿಗೆ ಅಥವಾ ಕಲ್ಲಿನ ಚೌಕಾಕೃತಿಯಗೋಡೆ ಕಟ್ಟುವುದು. ಗೋಡೆ ಕಟ್ಟಿದ ಮೇಲೆ ತೊಟ್ಟಿಯು ೧೬' ಉದ್ದ ೫' ಅಗಲ ಇರಬೇಕು. ಈ ಗೋಡೆಯೊಂದಿಗೆ ಐದು ಅಡಿ ಎತ್ತರದ ೯" ದಪ್ಪದ ಮಧ್ಯಂತರ ಗೋಡೆಯನ್ನು ಕಟ್ಟಬೇಕು.

ಸಮ ತಟ್ಟಾದ ಅಂಗಳದಲ್ಲಿ ಜಾಲರಿ ಹಾಸಿಕೊಂಡು ೧೬ ಬಾನಿಗಳನ್ನು ಬೋರಲು ಹಾಕುವ ಸ್ಥಳವನ್ನು ಬಿಟ್ಟು ೧:೪:೬ ರ ಮಿಶ್ರಣದ ಸಿಮೆಂಟ್ ಗಾರೆ ಹಾಕುವುದು. ಒಂದು ವಾರ ನೀರು ಚಿಮುಕಿಸುತ್ತಾ ಹ[...] ಮಾಡಿ ಒಣಗಿಸುವುದು. ಇದು ಜಾಲ[...] ತಾರಸಿ (ಸ್ಲ್ಯಾಬ್).

ತೊಟ್ಟಿಯ ಗೋಡೆಯು ಐದು ಅಡಿ [...]ತ್ತರ ಬಂದ ಮೇಲೆ ಮಧ್ಯಂತರ ಗೋಡೆ[...] ಅಡ್ಡಲಾಗಿ ತೊಟ್ಟಿಯ ಮಧ್ಯಕ್ಕೆ ಬರುವಂ[...] ಉದ್ದಲಾಗಿ ಕಲ್ಲು ಕಂಬಗಳನ್ನು ಮಲಗಿ[...]ವುದು. ಈಗ ಜಾಲರಿ-ತಾರಸಿಯನ್ನು [...]ಲ್ಲನೆ ಗೋಡೆ ಮತ್ತು ಕಲ್ಲು ಕಂಬಗಳ ಮೇ[...] ಇಡುವುದು. ತೊಟ್ಟಿ ಗೋಡೆಯನ್ನು [...] ಎತ್ತರಕ್ಕೆ ಮುಂದುವರಿಸುವುದು. ಕ[...] ಕಂಬದ ಎಡ ಪಾರ್ಶ್ವಕ್ಕೆ ೮ ಬಾನಿಗಳ[...]

ಕೆ. ಸು. ರಾಮಚಂದ್ರ

ಬಲಪಾರ್ಶ್ವಕ್ಕೆ ೮ ಬಾನಿಗಳೂ ಬರುವಂ[...] ಬೋರಲು ಹಾಕುವುದು. ಬಾನಿ ಮತ್[...] ಜಾಲರಿ-ತಾರಸಿಯ ಖಾಲಿಸ್ಥಳವನ್ನು ಅ[...] ಹೊರಬರದಂತೆ ಗಾರೆಯಿಂದ ತುಂಬಿ[...]ವುದು.

ಈಗ ಸಗಣಿ ಬಗ್ಗಡವನ್ನು ಹೊರಬಾ[...]–ಒಳಬಾಯಿಗಳಿಂದ ಏಕಕಾಲದಲ್ಲಿ ತುಂ[...]ಸುವುದು. ಬಾನಿಗಳ ರಂಧ್ರಕ್ಕೆ ನಳಿಕೆ[...]ನ್ನು ಜೋಡಿಸಿ ಒಲೆಗೆ ಕೊಂಡೊಯ್ಯು[...]ದು. (ಬಾನಿಗಳನ್ನು ಜೋಡಿಸುವಾಗ[...]ತ್ತಿಡುವಾಗ ಎಚ್ಚರಿಕೆಯಿಂದಿರಬೇಕು.) [...]ತರ ಬಾನಿಗಳ ಮೇಲೆ ನಿಧಾನವಾಗಿ ಮ[...] ಹಾಕಿ ಮುಚ್ಚಿ ಜಾನುವಾರು – ಮಕ್ಕ[...] ಹೋಗದಂತೆ ಭದ್ರವಾದ ಬೇಲಿಯ[...] ಕಟ್ಟಬೇಕು.

ಮಲೆನಾಡು ಮುಳುಗಡೆ ಯೋಜನೆಗಳು ಬೇಡ

(೨ನೇ ಪುಟದಿಂದ)

೧೯ ಸಾವಿರ ಎಕರೆ ಅರಣ್ಯ ಮುಳುಗಡೆಯಾಗುತ್ತದೆ. ಭದ್ರಾ ಅಭಯಾರಣ್ಯದಲ್ಲಿ ಹಾಯುವ ಕಾಲುವೆಯಿಂದಾಗಿ ಅಲ್ಲಿನ ಕಾಡು ಪ್ರಾಣಿಗಳು ದಿಕ್ಕಾಪಾಲಾಗಿ ಊರುಗಳ ಮೇಲೆ ನುಗ್ಗಿ ಹಾವಳಿ ಮಾಡುವುದಲ್ಲದೆ ಅಲ್ಲೊಂದು ೩ ಸಾವಿರ ಎಕರೆ ಅರಣ್ಯ ನಾಶವಾಗುತ್ತದೆ. ನೀರು ನಿಲ್ಲುವ ಪ್ರದೇಶದುದ್ದಕ್ಕೂ ೧೫ ಕಿ. ಮೀ. ಫಾಸಲೆಯಲ್ಲಿ ಮಣ್ಣಿನ ತೇವಾಂಶ ಅಧಿಕಗೊಂಡು ಸುತ್ತಲಿನ ಸಾವಿರಾರು ಎಕರೆ ಕಾಫಿ ತೋಟಗಳಿಗೆ ಶಾಶ್ವತವಾಗಿ ಶೀತಬಾಧೆ ಉಂಟಾಗುತ್ತದೆ. ಸಾವಿರಾರು ಎಕರೆ ಕಾಫಿ, ಏಲಕ್ಕಿ ಮುಂತಾದ ಜಮೀನುಗಳೂ ಕಳೆದುಹೋಗಿ, ಅಪಾರ ನಷ್ಟವಾಗುತ್ತದೆ.

ಕುದುರೆಮುಖ ಚಿಕ್ಕಮಗಳೂರು ಜಿಲ್ಲೆಯಿಂದ ಬೇರ್ಪಡುತ್ತದೆ. ಹೊರನಾಡು ಸಂಪರ್ಕ ಕಳೆದು ಕೊಳ್ಳುತ್ತದೆ. ಕಳಸ ಜಲಾವೃತವಾಗಿ ಸದಾ ಅಪಾಯದ ಅಂಚಿಗೆ ತಳ್ಳಲ್ಪಡುತ್ತದೆ. ಕಟ್ಟೆನಮನೆ ಮುಂತಾದ ಕಡೆ ವ್ಯಾಪಕ ಭೂಕುಸಿತವುಂಟಾಗಿ ಹಾನಿ ಆಗುತ್ತದೆ. ಇಲ್ಲಿ ಮುಳುಗಡೆಯಾಗುವ ಕಾಡುಗಳಲ್ಲಿದ್ದ ಹಲವು ಜಾತಿಯ ಅತ್ಯುತ್ತಮ ನಾಟಾ ಮರಗಳ ಕೊರತೆಯುಂಟಾಗಿ, ಸೌದೆಗೂ ಸತತ ಅಭಾವವುಂಟಾಗುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ, ಈ ನದಿಗೆ ಈಗಾಗಲೇ ಇರುವ ಲಕ್ಕವಳ್ಳಿ ಜಲಾಶಯಕ್ಕೆ ನೀರುಣಿಸುವ ಜಲಾನಯನ ಪ್ರದೇಶಗಳಲ್ಲಿ ಮಳೆ ಏರು ಪೇರಾಗುತ್ತದೆ. ಈ ವರೆಗೆ ಕೇವಲ ಎರಡು ಬಾರಿ ಮಾತ್ರ ಪೂರ್ಣ ತುಂಬಿರುವುದಾಗಿ ಅಧಿಕೃತ ದಾಖಲೆಗಳಲ್ಲಿ ಹೇಳಲಾಗಿದ್ದರೂ ನ್ಯಾಯವಾಗಿ ಒಮ್ಮೆಯೂ ತುಂಬಿದ ಆ ಜಲಾಶಯ ಇನ್ನು ಪೂರ್ಣ ಬರಿದಾಗುವ ಸ್ಥಿತಿ ಬರುತ್ತದೆ. ಇದರ ಭೀಕರ ಪರಿಣಾಮಗಳ ಬಗ್ಗೆ ಸ್ವಲ್ಪ ಯೋಚಿಸಿ!

ಇವೆಲ್ಲ, ಮುಳುಗಡೆಯಲ್ಲಿ ಭೂಮಿ, ಮನೆ ಕಳೆದುಕೊಳ್ಳುವವರ ಹಾಗೂ ಲಕ್ಕವಳ್ಳಿ ನಾಲೆ ಅಚ್ಚುಕಟ್ಟುದಾರರ ನಷ್ಟದ ಲೆಕ್ಕವಾಯಿತು. ಈ ಪರಿಧಿಯಿಂದ ಹೊರಗಿರುವ ಇತರ ಜನರಿಗೆ ಏನು ನಷ್ಟ ?

ಬೇರೆಯವರಿಗೆ ಹೇಗೆ ನಷ್ಟ?

ಈ ಪ್ರಶ್ನೆಗೆ ಉತ್ತರವನ್ನು ಶೃಂಗೇರಿ, ಕೊಪ್ಪ, ನ. ರಾ. ಪುರ ತಾ||ಗಳ ಹಳ್ಳಿಗರು ಈಗಾಗಲೇ ಅನುಭವಿಸುತ್ತಿದ್ದಾರೆ. ಅದು : ಕಾಡು ಪ್ರಾಣಿಗಳ ಹಾವಳಿ. ಕುದ್ರೆಮುಖ, ಚಕ್ರಾ, ವಾರಾಹಿ, ಮಾಣಿ ಯೋಜನೆಗಳು. ಕೆರೆಕಟ್ಟೆ–ಕಾರ್ಕಳ ರಸ್ತೆ ಮುಂತಾದುವುಗಳಿಂದಾಗಿ, ಈ ತಾ|| ಗಳ ಹಲವಾರು ಹಳ್ಳಿಗಳಲ್ಲಿ ಹುಲಿಗಳ ಹಾವಳಿ ಈ ಆರೇಳು ವರ್ಷಗಳಲ್ಲಿ ಖಾಯಂ ಆಗಿಬಿಟ್ಟಿದೆ. ಒಂದೊಂದು ಹಳ್ಳಿಯಲ್ಲೇ ಇವು ಪ್ರತಿವರ್ಷ ನೂರರ ಸಂಖ್ಯೆಯಲ್ಲಿ ಜಾನುವಾರುಗಳನ್ನು ಕೊಲ್ಲುತ್ತ, ಹಾಡೇ ಹಗಲು ಮನುಷ್ಯರಿಗೆ, ಶಾಲೆಯ ಮಕ್ಕಳಿಗೆ ದಾರಿಯಲ್ಲಿ ಎದುರಾಗುತ್ತಿವೆ. **ಇವಕ್ಕೆ ಪಾನಗಡದ ತೋಳಗಳ ಸ್ಫೂರ್ತಿ ಎಂದು ಉಕ್ಕುತ್ತದೋ ಎಂದು ಹಳ್ಳಿಗರು ಜೀವ ಎಡಗೈಯಲ್ಲೇ ಹಿಡಿದುಕೊಂಡು ಕಾಲ ತಳ್ಳುತ್ತಿದ್ದಾರೆ!**

ಇನ್ನು ಹಂದಿಗಳ ಹಾವಳಿಯಂತೂ ಹೇಳಿದರೆ ನಂಬಲು ಬರುವಂಥದಲ್ಲ. ಜಮೀನುಗಳಲ್ಲಿ ಅವು ತಿನ್ನದ ವಸ್ತುವಿಲ್ಲವಾಗಿದೆ. ನಾಟಿ ಮಾಡಿದ ಗದ್ದೆಯನ್ನು ಅವು ಮೇಯುತ್ತವೆ, ಮನೆಯ ಅಂಗಳಕ್ಕೆ ಬಂದು ಕೆಸುವಿನ ಏರಿಯನ್ನು ಉತ್ತು ಹೋಗುತ್ತವೆ, ಐದಾರು ವರ್ಷದೊಳಗಿನ ಒಂದೇ ಒಂದು ಅಡಿಕೆ ಸಸಿ ಬಿಡುವುದಿಲ್ಲ–ಎಂದರೆ ಯಾರಾದರೂ ನಂಬಲು ಬಾರದಂಥ ವಿಷಯ, ಆದರೆ ಅಷ್ಟೇ ಕ್ರೂರ ಸತ್ಯ.

ಇದೇ ರೀತಿ ಬಾಳೆಹೊನ್ನೂರು ಹೋಬಳಿಯಲ್ಲಿ ಕಾಡಾನೆಗಳ ಹಾವಳಿಯೂ ಖಾಯಂ ಆಗುತ್ತಿದೆ. ಕಷ್ಟಪಟ್ಟು ಬೆಳೆಸಿದ ಪೈರು ಅವುಗಳಿಗೆ ಆಹುತಿಯಾಗುತ್ತಿದೆ. ಹಿಂದೆ, ಆನೆಗಳನ್ನು ಓಡಿಸಲು ದೂರದಿಂದ ಬೆಂಕಿ ತೋರಿಸುವುದು, ಡಬ್ಬಿ, ತಮ್ಮಟೆ ಇತ್ಯಾದಿ ಬಡಿದು ದೊಡ್ಡ ಶಬ್ದ ಮಾಡುವುದು ಕ್ರಮಗಳೆಂದು ಪಾಠಗಳಲ್ಲಿ ಓದುತ್ತಿದ್ದೆವು. ಆದರೆ ಈಗ, ಜಂಪೆ ಸೌದೆ ಉರಿಸಿ ಕೊಳ್ಳಿ ಮಾಡಿಕೊಂಡು ಆನೆಯ ಹತ್ತಿರ ಹೋಗಿ ಅದಕ್ಕೆ ತಿವಿಯಬೇಕು (ತಿವಿದಾಗ ತುಂಬಾ ಕಿಡಿ ಅಷ್ಟು ದೂರದವರೆಗೂ ಹಾರುತ್ತದೆ), ಅಥವಾ ಪ್ರಖರವಾದ ಟಾರ್ಚನ್ನು ಆನೆಯ ಕಣ್ಣಿಗೆ ಹತ್ತಿರದಿಂದ ಬಿಡಬೇಕು! ಆಗ ಮಾತ್ರ ಅಪೇಕ್ಷದಲುತ್ತದೆ.

ಮೊನ್ನೆಯಷ್ಟೇ ಹೀಗೆ ಆನೆ ಓಡಿಸುವ ಪ್ರಯತ್ನದಲ್ಲಿ ಆಡುವಳ್ಳಿಯ ೨೫ ವಯಸ್ಸಿನ ಯುವಕ ಮಂಜುನಾಥ್ ಆನೆಗೆ ಬಲಿಯಾದ. ಸ್ವಲ್ಪ ದೂರದ ಸಾರಗೋಡಿನ ಬಳಿ ಬೆಳಗಿನ ಹೊತ್ತೇ ತೋಟದಲ್ಲಿ ಕೆಲಸ ಮಾಡುತ್ತಿದ್ದ ಗರ್ಭಿಣಿಯೊಬ್ಬಳು ಆನೆಯ ತುಳಿತಕ್ಕೆ ಸಿಕ್ಕಿ ಅಸು ನೀಗಿದಳು.

ಹೀಗಾಗಿ ಇನ್ನೊಂದು 'ಮುಳುಗಡೆ ಯೋಜನೆ' ಯೆಂದರೆ ಈ ಎಲ್ಲ ಜನರಿಗೆ 'ಇನ್ನು ಮೇಲೇಳಲಾರದಂಥ' ಹೊಡೆತವೇ. ಆದ್ದರಿಂದ ಯೋಜನೆಗೆ ಅಂತಿಮ ಮಂಜೂರಾತಿ ಸಿಗುವ ಮೊದಲು ಅದನ್ನು ಎಲ್ಲರೂ ಸೇರಿ ತಡೆಯಬೇಕು. ಇದಕ್ಕೆ ಇಡೀ ಜಿಲ್ಲೆಯ ಜನ ಒಂದಾಗಬೇಕು. "ನನ್ನೊಬ್ಬನಿಂದೇನು", "ಎಲ್ಲರಿಗೂ ಆದ್ದೇ ನಂಗೂ ಆಗುತ್ತೆ" ಮುಂತಾದ ಜೋಬದ್ರತನವನ್ನಿಲ್ಲಿ ಸ್ವಲ್ಪ ಕಾಲವಾದರೂ ಬಿಟ್ಟು, ಎಲ್ಲರ ಕೈಗೆ ಕೈ ಜೋಡಿಸುವುದು ಈಗ ನಮ್ಮೆಲ್ಲರ ಅಳಿವು ಉಳಿವಿನ ಪ್ರಶ್ನೆ.

ಸಂಯಮ ಇರಲಿ

ಯೋಜನೆ ವಿರೋಧಿಸಬೇಕು ಎಂದಾಕ್ಷಣ, ಭಾವೋದ್ರೇಕ ಸಲ್ಲ. ಪರಸ್ಪರ ಕುತ್ತಿಗೆಗೆ ಕೈ ಹಾಕಿಕೊಳ್ಳುವುದು ತಪ್ಪು. ನಿಜವಾಗಿ ಹೇಳಬೇಕೆಂದರೆ, ಈ ಯೋಜನೆಯಿಂದ ನೀರುಣಿಸಲು ಉದ್ದೇಶಿಸಲಾಗಿರುವ ಪ್ರದೇಶಗಳ ಕ್ಷಾಮ ಪರಿಸ್ಥಿತಿ ನೋಡಿದರೆ ಎಂಥವರಿಗೂ ಹೃದಯ ಕರಗೀತು, ಯೋಜನೆ ವಿರೋಧಿಸಲು ಮನಸ್ಸು ಬಾರದಾದೀತು. ಆದರೆ, ಹಾಗೆಂದು ಇನ್ನೂ ಸಾವಿರಾರು ಕುಟುಂಬಗಳನ್ನೂ ಅದೇ ರೀತಿ ನಿರ್ಗತಿಕರಾಗಿ ಮಾಡಬೇಕೆ ? ಅಲ್ಲಿರುವ ಜನ ಬದುಕಲು ಎಲ್ಲಿಗೆ ಹೋಗುವುದು ?

ಆದ್ದರಿಂದ, ನಮ್ಮನ್ನೂ ಉಳಿಸಿ, ಅವರಿಗೂ ನೀರುಣಿಸಬಲ್ಲ ಬೇರೇನಾದರೂ ಯೋಜನೆಯನ್ನು ಆಡಳಿತಗಾರರು ಮಾಡಲಿ. ಇರುವ ಎಲ್ಲ ಸಣ್ಣ ಪುಟ್ಟ ಅವಕಾಶಗಳನ್ನೂ ಉಪಯೋಗಿಸಿಕೊಳ್ಳಲಿ. ಏತ ನೀರಾವರಿ, ಕೆರೆಗಳು, ಬಾವಿ ಮತ್ತು ಕೊಳವೆ ಬಾವಿಗಳು–ಹೀಗೆ ಹಲವು ಮೂಲಗಳನ್ನು ಒಟ್ಟಾಗಿ ರೂಢಿಸಲಿ.

ಯೋಜನೆ ಬೇಕೆನ್ನುವವರೂ, ಯೋಜನೆ ವಿರೋಧಿಸುವವರೂ ಒಟ್ಟಾಗಿ ಸರ್ಕಾರಗಳೊಂದಿಗೆ, ಮುಖ್ಯವಾಗಿ ಕೇಂದ್ರ ಸರ್ಕಾರದೊಂದಿಗೆ, ಒಂದು ಬಹು ಮುಖ್ಯ ಬೇಡಿಕೆಯ ಬಗ್ಗೆ ಒತ್ತಾಯ ಶುರುಮಾಡಬೇಕು. ಅದೆಂದರೆ: ಗಂಗೆ–ಕಾವೇರಿ ನದಿಗಳನ್ನು ಜೋಡಿಸುವ ಬೃಹದ್ ಯೋಜನೆ. ಇದನ್ನು ಹಂತಹಂತವಾಗಿ ಪೂರೈಸುತ್ತ ಬಂದರೆ ಇನ್ನು ೧೦ ಅಥವಾ ೧೫ ವರ್ಷಗಳಲ್ಲಿ ಪೂರೈಸೀತು. ಇದರಿಂದ ಇಡೀ ದೇಶದ, ಬಹುಶಃ ನಾವು ಕೇಳಿದ ಕಡೆಗೆಲ್ಲ ನೀರು ಒದಗಲು ಆದೀತು. ಇದಕ್ಕೆ ಎಲ್ಲ ರಾಜ್ಯಗಳೂ ಅತಿ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ತಮ್ಮ ಪಾಲು ಕೊಡಬೇಕು. ಈ ಕುರಿತು ಈಗಿನಿಂದಲಾದರೂ ನಾವು ಒತ್ತಾಯಿಸದಿದ್ದರೆ, ಅದಷ್ಟು ಬೇಗ ಕಾರ್ಯಗತ ಮಾಡಿಸದಿದ್ದರೆ, ಬರುವ ಹಲವಾರು ವರ್ಷಗಳ ಕಾಲ ಯೋಜನೆ ಬೇಕಾದವರು–ಬೇಡಾದವರು ನಮ್ಮಲ್ಲೇ ಬಡಿದಾಡುತ್ತ ಇರಬೇಕಾಗುತ್ತದೆ.

ಈ ವಿಷಯವನ್ನು ಎಲ್ಲರಿಗೂ ಸಂಯಮದಿಂದ ತಿಳಿಸಿ ಹೇಳುತ್ತಾ ಈ ಯೋಜನೆಯನ್ನು ನಾವು–ನೀವೆಲ್ಲರೂ ವಿರೋಧಿಸಬೇಕು. ಇದೇ ಕಾರಣಕ್ಕಾಗಿ ನಾವು ತುಂಗಾ ಮೇಲ್ದಂಡೆ ಯೋಜನೆ ಮತ್ತು ಅದಕ್ಕೆ ಪೂರಕವಾದ ಮಾಣಿ ಯೋಜನೆಗಳನ್ನೂ ವಿರೋಧಿಸಬೇಕು.

—ಸಿರಿಮನೆ ನಾಗರಾಜ್.

ನಮ್ಮ ಮತದಾರರ ತಿಳುವಳಿಕೆಯ ಮಟ್ಟ

ಮಾನ್ಯರೆ,

ಇಂದಿರಾ ಗಾಂಧಿಯವರ ಕೊಲೆಯಾದ ... ನಾನು ಒಂದು ಕಡೆಗೆ ಹೋಗಿದ್ದಾಗ ... ನಿಲ್ದಾಣದಲ್ಲಿ ಇಬ್ಬರು ಮಾತಾಡುತ್ತಿ...

"ಅಮ್ಮನ್ನೊಂದು ತೆಗೆದು ಬಿಟ್ರಲ್ಲ ... ರಾಯ?"

"... ತೆಗೀದೆ ಇನ್ನೇನ್ಮಾಡ್ತಾರೆ ? ಇನ್ನೇನು ... ಕ್ಷನ್ ಬಂತು. ಅವ್ರು ಪುನಃ ಗೆಲ್ಲೂದು ... ಅಂತ್ಹೇಳಿ ಜನತಾದವರೇ ಕೊಲ್ಲಿಸಿ ...".

–ಈ ಸಂಭಾಷಣೆಯಿಂದ ನನಗೆ ವ್ಯಥೆ ... ಇತು. ಇನ್ನೆ ... ದರೆ ಗೊತ್ತಿ ... "ಖಲಿಸ್ಥಾನ"ದ ಹೆಸರೂ ಕೇಳಿರದ, ... ರು ಆಡಿದ್ದರಲ್ಲಿ ಆಶ್ಚರ್ಯವೇನಿರಲಿ ... ನವರಿಗೆ ಗೊತ್ತಿರುವುದೆಲ್ಲ ಕಾಂಗ್ರೆಸು, ... ಮ್ಮ, ಹಸ್ತ, ಜನತಾ....ಇಷ್ಟೇ. ... ನಮ್ಮ ಭಾರತದ ಮತದಾರರ ... ಳಿಕೆಯ ಮಟ್ಟ!

–ರಮೇಶ್, ಎಸ್. ವಿ, ಬೇಗಾರು.

ಓದುಗರ ಪತ್ರಗಳು

ಕಲ್ಲುಗುಡ್ಡೆ ಬಳಿ ಬಾವಿಗಳ 'ಸಂತೆ' !

ಮಾನ್ಯರೆ,

ಕಲ್ಲುಗುಡ್ಡೆ ಗ್ರಾಮದ ಮಂಜನ ಬೈಲು ಶಾಲಾ ಆವರಣದಲ್ಲಿ ಎರಡು ವರ್ಷದ ಹಿಂದೆ ಸರ್ಕಾರದ ವತಿಯಿಂದ ನೀರಿಗಾಗಿ ಒಂದಾದ ನಂತರ ಒಂದರಂತೆ ಎರಡು ಕೊಳವೆ ಬಾವಿಗಳನ್ನು ತೋಡಿಸಲಾಯ್ತು. ಆದರೆ ಆ ಬಾವಿಗಳಿಗೆ ನೀರೆತ್ತಲು ಅಗತ್ಯ ಬೇಕಾದ ಹಿಡಿಪು ಹಾಕುವುದನ್ನೇ ಮರೆತು ಹೋದರು!

ಈ ಮಧ್ಯೆ ಆದಾದ ಒಂದು ವರ್ಷದ ನಂತರ ಅದೇ ಸರ್ಕಾರದ ಯೋಜನೆಯಂತೆ ಇನ್ನೊಂದು ತೆರೆದ ಬಾವಿಯನ್ನು ತೋಡಲಾಯ್ತು. ಅದೂ ಜನವಸತಿಯಿಂದ ಸಾಕಷ್ಟು ದೂರವಿದ್ದು, ಎಲ್ಲರ ಉಪಯೋಗಕ್ಕೆ ಪೂರ್ಣ ಸಹಕಾರಿಯಾಗಿಲ್ಲ. ಈಗ ಪುನಃ ಮತ್ತೊಂದು ಬಾವಿಗೆ ಯೋಜನೆ ತಯಾರಾಗಿದೆಯಂತೆ !

ಈ ವಸತಿ ಪ್ರದೇಶದಿಂದ ಸುಮಾರು ಒಂದೂವರೆ ಫರ್ಲಾಂಗು ದೂರದಲ್ಲಿ (ಮೇಲ್ಭಾಗದಲ್ಲಿ) ಸದಾ ನೀರಿರುವ ಒಂದು ಕೆರೆಯಿದೆ. ಅಲ್ಲೊಂದು ಟ್ಯಾಂಕ್ ಕಟ್ಟಿಸಿ ಅಗತ್ಯವಿರುವಷ್ಟು ನಲ್ಲಿಗಳನ್ನು ಹಾಕಿದಲ್ಲಿ ಅತೀ ಕಡಿಮೆ ಖರ್ಚಿನಲ್ಲಿ ಎಲ್ಲರ ಉದ್ದೇಶ ಈಡೇರುವುದರಲ್ಲಿ ಸಂದೇಹವಿಲ್ಲ. ಯೋಜನಾಕರ್ತರು ಇನ್ನೊಂದು ಹೊಸ ಬಾವಿ ತೋಡಿಸುವ ಯೋಚನೆ ಬಿಟ್ಟು ಈ ಟ್ಯಾಂಕು ಕಟ್ಟಿಸಿದರೆ, ಅದರಿಂದ ಆಸುಪಾಸಿನ ಇನ್ನೂ ಹಲವು ಮನೆಗ ಲಾಭವಾಗುವುದು. ಹೀಗೆ, ಐವತ್ತು ಸಾವಿರ ರೂ. ಗಳ ಕೆಲಸವನ್ನು ಐದು ಸಾವಿರ ರೂ. ಗಳಲ್ಲಿ ಯಶಸ್ವಿಯಾಗಿ ನಿರ್ವಹಿಸಬಹುದು. ಇದು ಸ್ಥಳೀಯರ ಕಳಕಳಿ.

—ಕೆ. ವಿ. ಗಣೇಶ್,
ಬಿಳಾಲುಕೊಪ್ಪ

ಪುರಸಭೆಗಳ ಹಣಕಾಸು ಸುಧಾರಿಸುವ ಬಗ್ಗೆ ಕೊಪ್ಪ ಪುರಸಭೆ ಮುಂಡಿಸಿದ ಸಲಹೆಗಳು

ಕೊಪ್ಪ: ಪುರಸಭೆ ಮತ್ತಿತರ ಸ್ಥಳೀಯ ಸಂಸ್ಥೆಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸಲಹೆ ನೀಡಲು ರಾಜ್ಯ ಸರ್ಕಾರ ನೇಮಿಸಿರುವ ಸ್ಥಳೀಯ ಹಣಕಾಸು ಆಯೋಗ ಕಳೆದ ತಿಂಗಳು ವಿಚಾರ ವಿನಿಮಯಕ್ಕಾಗಿ ಚಿಕ್ಕಮಗಳೂರಿಗೆ ಭೇಟಿ ಕೊಟ್ಟಿದ್ದಾಗ ಕೊಪ್ಪ ಪುರಸಭೆ ಈ ಕೆಳಕಂಡ ಸಲಹೆಗಳನ್ನು ಆಯೋಗದ ಮುಂದಿಟ್ಟಿತು.

(೪ನೇ ಪುಟಕ್ಕೆ)

ಸೂಚನೆ

'ಕಾಮಧೇನು ಸಗಣಿ ... ' ಕಟ್ಟಿಸಬಯಸುವವರು ಶ್ರೀ ಕೆ. ... ಚಂದ್ರ, ಕೃಷಿ ಸಹಾಯಕರು, ... ಕೊಪ್ಪ ತಾ|| ಇವರನ್ನಾಗಲೀ, ... ರ್ಯಾಲಯಕ್ಕಾಗಲಿ ಖುದ್ದು ಭೇಟಿ ...

ಪುರಸಭೆಗಳ ಹಣಕಾಸು ಸುಧಾರಿಸುವ ಬಗ್ಗೆ
ಕೊಪ್ಪ ಪುರಸಭೆ ಮಂಡಿಸಿದ ಸಲಹೆಗಳು

(೩ ನೇ ಪುಟದಿಂದ)

೧) ರದ್ದಾಗಿರುವ ಆಕ್ಟ್ರಾಯ್‌ಗೆ ಬದಲಾಗಿ, ಸ್ಟಾಂಪ್ ಶುಲ್ಕದ ಮೇಲೆ ಸರ್‌ಚಾರ್ಜ್ ವಿಧಿಸಲು ಅವಕಾಶ ಕೊಡಬೇಕು.

೨) ಪುರಸಭೆಯ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಮಾರಾಟ ತೆರಿಗೆ ಮತ್ತು ವೃತ್ತಿ ತೆರಿಗೆಗಳಲ್ಲಿ ಪುರಸಭೆಗೆ ಒಂದು ಪಾಲು ಕೊಡಬೇಕು.

೩) ಅಬ್ಕಾರಿ ಲೈಸೆನ್ಸ್ ನೀಡುವಾಗ ಲೈಸೆನ್ಸ್ ಫೀ ಮತ್ತು ತೆರಿಗೆಗಳ ಬಾಬ್ತು, ಸರ್ಕಾರ ಸಂಗ್ರಹಿಸುವ ಸುಮಾರು ೧೦ ಸಾವಿರ ರೂ. ಗಳಲ್ಲಿ ಒಂದು ಪಾಲು ಪುರಸಭೆಗೆ ಕೊಡಬೇಕು.

೪) ಪುರಸಭೆ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಮನರಂಜನೆ ತೆರಿಗೆಯಲ್ಲಿ ಸಂಗ್ರಹಣಾ ಶುಲ್ಕ ಎಂದು ಶೇ. ೧೦ ಭಾಗ ಹಿಡಿದುಕೊಂಡು ಶೇ. ೯೦ ಭಾಗವನ್ನು ಆಯಾ ಪುರಸಭೆಗೆ ಕೊಡುವ ಕ್ರಮ ೧೯೭೮ರ ವರೆಗೆ ಇದ್ದು, ಈಗ ಕೇವಲ ಶೇ. ೩೬ ಭಾಗ ಕೊಡಲಾಗುತ್ತಿದೆ. ಇದನ್ನು ಹಿಂದಿನಂತೆಯೇ ಕೊಡಬೇಕು.

೫) ರಸ್ತೆ ಪರಿಹಾರವೆಂದು ವರ್ಷಕ್ಕೆ ೩೦೭ ರೂ. ಗಳನ್ನು ಸರ್ಕಾರ ಪುರಸಭೆಗೆ ಕೊಡುತ್ತಿದೆ. ಕನಿಷ್ಠಪಕ್ಷ, ಸಂಗ್ರಹಣೆಯ ಶೇ. ೫೦ ಭಾಗದಷ್ಟಾದರೂ ಆಯಾ ಪುರಸಭೆಗೆ ಕೊಡಬೇಕು.

(೬) ಬಾಡಿಗೆಗೆ/ಗುತ್ತಿಗೆಗೆ ಕೊಟ್ಟ ಜಾಗವನ್ನು, ೫ ವರ್ಷ ಭರ್ತಿ ಆದ ಕೂಡಲೇ ಬೇರಾವ ಕಾನೂನು ಕ್ರಮದ ಅಗತ್ಯವೂ ಇಲ್ಲದೆ ಪುನಃ ಹರಾಜು ಹಾಕಲು ಸಾಧ್ಯವಾಗುವಂತೆ ಕಾನೂನಿಗೆ ತಿದ್ದುಪಡಿ ಮಾಡಬೇಕು.

ಈ ಸಲಹೆಗಳೆಲ್ಲ ಬಹಳ ಉಪಯುಕ್ತವಾದವುಗಳೆಂಬುದು ನಿರ್ವಿವಾದ.

ಆನೆ ಹಲ್ಲೆಗೆ ತುತ್ತಾದವರ ಕುಟುಂಬಗಳಿಗೆ ಪರಿಹಾರ

ಕೊಪ್ಪ: ಇತ್ತೀಚೆಗೆ ಆನೆಯ ಹಲ್ಲೆಯಿಂದ ಸಾವಿಗೀಡಾದ ಸಾರಗೋಡು ಗ್ರಾಮದ ಪಾರ್ವತಿ ಮತ್ತು ಗಡಿಗೇಶ್ವರದ ಮಂಜುನಾಥ್ ಅವರುಗಳ ಕುಟುಂಬಗಳಿಗೆ ಅರಣ್ಯ ಇಲಾಖೆಯಿಂದ ತಲಾ ೫೦೦೦ರೂ. ಗಳ ಪರಿಹಾರವನ್ನು ವಿತರಿಸಲಾಯಿತು.

ಮಂಜುನಾಥ್ ಅವರ ಪತ್ನಿ ಎಸ್ಸೆಸ್ಸೆಲ್ಸಿ ಓದಿದ್ದು, ಆಕೆಗೆ ಇಲಾಖೆಯಲ್ಲಿ ನೌಕರಿ ಹಾಗೂ ೨ ಎಕರೆ ಜಮೀನನ್ನು ಕೊಡಿಸುವಂತೆ ಶಾಸಕ ಗೋವಿಂದ ಗೌಡರು ಸಂಬಂಧ ಪಟ್ಟವರಿಗೆ ಶಿಫಾರ್ಸು ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಸಂಘ

ಚಿಕ್ಕಮಗಳೂರು: ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿಗೆ ೧೯೮೪-೮೫ಕ್ಕೆ ಈ ಕೆಳಕಂಡವರು ಆಯ್ಕೆಯಾಗಿದ್ದಾರೆ.

ಹೆಚ್. ಕೆ. ನರಸಿಂಹ ಮೂರ್ತಿ (ಅಧ್ಯಕ್ಷರು), ಸ. ಗಿರಿಜಾಶಂಕರ್, ಮನೆವಾರ್ತೆ ಚಂದ್ರಶೇಖರ್ (ಉಪಾಧ್ಯಕ್ಷರು), ಗಿರೀಶ್ ಮಾವಿನಕಾಡು (ಕಾರ್ಯದರ್ಶಿ), ಎನ್. ಕೃಷ್ಣಪ್ಪ, ಅಂಚೆ ನಾಗಭೂಷಣ್ (ಸಹ ಕಾರ್ಯದರ್ಶಿಗಳು), ಬಿ.ಎಸ್. ವಿದ್ಯಾನಂದ ಭಟ್ (ಖಜಾಂಚಿ), ಚಿ. ಶ್ರೀನಿವಾಸಯ್ಯ, ಕೆ.ಹೆಚ್.ನಾರಾಯಣ, ವೆಂಕಟರಾಮಯ್ಯ (ಕಾರ್ಯಕಾರಿ ಸಮಿತಿ ಸದಸ್ಯರು), ಹೆಚ್. ಎಸ್.ಸೂರ್ಯನಾರಾಯಣ,ಜಿ.ವಿ.ಚೂಡನಾಥ ಅಯ್ಯರ್, ಎಸ್.ಸುಬ್ಬರಾವ್ (ಖಾಯಂ ಆಹ್ವಾನಿತರು).

ಪತ್ರಕರ್ತರ ವಿವರ ಬೇಕು

ಸಂಘವು ಜಿಲ್ಲೆಯ ಎಲ್ಲಾ ಪತ್ರಕರ್ತರ ಪಟ್ಟಿಯೊಂದನ್ನು ಸಿದ್ಧಪಡಿಸಲು ಉದ್ದೇಶಿಸಿದ್ದು, ಕೊಪ್ಪ ತಾಲ್ಲೂಕಿನ ಎಲ್ಲಾ ಪತ್ರಕರ್ತರು ತಮ್ಮ ವಿಳಾಸಗಳನ್ನು ಶ್ರೀ ಗಿರೀಶ್ ಮಾವಿನಕಾಡು, ಕೇರಾಫ್ 'ಹೊಸದಿಗಂತ' ದಿನಪತ್ರಿಕೆ, ಚಿಕ್ಕಮಗಳೂರು-ಇಲ್ಲಿಗೆ ಕಳಿಸಲು ಕೋರಲಾಗಿದೆ. ಅಲ್ಲದೆ ಎಲ್ಲಾ ಪತ್ರಕರ್ತರೂ ಸಂಘದ ಸದಸ್ಯರಾಗಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದೂ ಕೋರಿದೆ.

ಕರ್ನಾಟಕ ಬ್ಯಾಂಕ್ ಮೇಲ್ಪಾಲು ಶಾಖೆಯಿಂದ ಬಡ ಜನರಿಗೆ ಸಾಲ ವಿತರಣೆ

ಮೇಲ್ಪಾಲು: ಇಲ್ಲಿನ ಕರ್ನಾಟಕ ಬ್ಯಾಂಕ್ ಶಾಖೆ ಐ.ಆರ್.ಡಿ.ಪಿ. ಯೋಜನೆಯಡಿ ೧೨ ಬಡ ಕುಟುಂಬಗಳಿಗೆ ವಿವಿಧ ಉದ್ದೇಶಗಳಿಗಾಗಿ ಒಟ್ಟು ೫೩,೫೦೦ ರೂ. ಗಳನ್ನು ಈಚೆಗೆ ವಿತರಣೆ ಮಾಡಿತು. ಈ ಯೋಜನೆಯಲ್ಲಿ ೧೯೮೪-೮೫ ರ ಸಾಲಿಗೆ ಈ ವರೆಗೆ ೨೩ ಜನರಿಗೆ ಒಟ್ಟು ೭೭,೦೦೦ ರೂ. ಗಳನ್ನೂ, ಗಿರಿಜನ ಅಭಿವೃದ್ಧಿ ಯೋಜನೆಯಡಿ ೧೫ ಜನರಿಗೆ ೧ಲಕ್ಷ ೪೦ ಸಾವಿರ ರೂ. ಗಳನ್ನೂ ನೀಡಿರುವುದಾಗಿ ಬ್ಯಾಂಕಿನ ಮ್ಯಾನೇಜರ್ ಎಲ್. ರಾಘವಾಚಾರ್ ತಿಳಿಸಿದ್ದಾರೆ.

ಉದ್ಯೋಗ ವಾರ್ತೆ
ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗೆ ಅರ್ಜಿ ಆಹ್ವಾನ

1984-85 ನೇ ಸಾಲಿನಲ್ಲಿ ಜಿಲ್ಲೆಯ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗೆ ನೇರ ಭರ್ತಿ ಮಾಡಲು 18 ವರ್ಷಕ್ಕೆ ಮೇಲ್ಪಟ್ಟ ಎಸ್. ಎಸ್. ಎಲ್. ಸಿ. ತೇರ್ಗಡೆ ಹೊಂದಿದ ಅರ್ಹ ಅಭ್ಯರ್ಥಿಗಳಿಂದ ನಿಯಮಿತ ಅರ್ಜಿ ಫಾರಂಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಸಂಬಂಧಿಸಿದ ದಾಖಲೆಗಳೊಂದಿಗೆ ಅರ್ಜಿಯನ್ನು "ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು ಗ್ರಾಮ ಲೆಕ್ಕಾಧಿಕಾರಿಗಳ ನೇಮಕಾತಿ ಸಮಿತಿ, ಚಿಕ್ಕಮಗಳೂರು ಜಿಲ್ಲೆ", ಇವರಿಗೆ 15-12-84 ರೊಳಗೆ ಸಲ್ಲಿಸಬಹುದಾಗಿದೆ.

ನಂ. ವ್ಯಮಾಸ/ಶಿ/೩ವಿ/ /84-85.

ವ್ಯವಸಾಯೋತ್ಪನ್ನ ಮಾರುಕಟ್ಟೆ
ಸಮಿತಿಯ ಕಾರ್ಯಾಲಯ,
ಶಿವಮೊಗ್ಗ, ತಾರೀಖು:22-11-84.

ಸಂಕ್ಷಿಪ್ತ ಟೆಂಡರು ಪ್ರಕಟಣೆ

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ ಇವರಿಂದ ಈ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ದರ್ಜೆ ಎರಡು ಮತ್ತು ಮೇಲ್ಪಟ್ಟ ಕಂಟ್ರಾಕ್ಟರುದಾರರಿಂದ ಮತ್ತು ರಿಜಿಸ್ಟರ್ಡ್ ಫರ್ಮುಗಳಿಂದ ದ್ವಿಪ್ರತಿಯಲ್ಲಿ ಟೆಂಡರು ಕರೆಯಲಾಗಿದೆ.

ಕ್ರಮ ಸಂಖ್ಯೆ (1)	ಕೆಲಸದ ಹೆಸರು (2)	ಟೆಂಡರಿಗೆ ಇಟ್ಟ ಕಾಮಗಾರಿಯ ಮೌಲ್ಯ (3)	ಇ.ಎಂ.ಡಿ. (4)	ಕಾಮಗಾರಿ ಪೂರೈಸ ಬೇಕಾದ ಅವಧಿ (5)	ಟೆಂಡರು ಫಾರ್ಮಿನ ಬೆಲೆ. (6)
1)	ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಪ್ರಾಂಗಣದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ "ಆವರಣ ಗೋಡೆ" (ಕಾಂಪೌಂಡ್) ಕಟ್ಟುವುದು. (ಶೇಕಡಾವಾರು ಟೆಂಡರ್)	5,66,522 00	11,331-00	12 ತಿಂಗಳು (ಮಳೆ ಗಾಲ ಬಿಟ್ಟು)	ಡಿ.ಡಿ. ಅಥವಾ ನಗದು ರೂ.75-00 ಅಂಚೆ ಮೂಲಕ ರೂ.85-00
2)	ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಪ್ರಾಂಗಣಕ್ಕೆ ಕಟ್ಟುತ್ತಿರುವ "ಆವರಣ ಗೋಡೆ"ಗೆ ಕಬ್ಬಿಣದ ಸಲಾಕೆಗಳನ್ನು ತಯಾರಿಸಿ ಒದಗಿಸುವುದು. (ಐಟಂವೈಜ್ ಟೆಂಡರ್)	17,100-00	428-00	1 ತಿಂಗಳು	ನಗದು ಅಥವಾ ಡಿ.ಡಿ. ರೂ.20-00 ಅಂಚೆ ಮೂಲಕ ರೂ.30-00

ಸೂಚನೆ:-
1) ಖಾಲಿ ಟೆಂಡರು ಫಾರ್ಮುಗಳನ್ನು ತಾ: 12-12-84ರಿಂದ ತಾ: 15-12-84ರವರೆಗೆ ವೇಳೆ ಮುಂಜಾನೆ 10-30 ರಿಂದ ಸಾಯಂಕಾಲ 5-00 ಘಂಟೆಯವರೆಗೆ ವಿತರಣೆ ಮಾಡಲಾಗುತ್ತದೆ.
2) ಟೆಂಡರು ಸ್ವೀಕಾರ ದಿನಾಂಕ: 17-12-84ರ ಮುಂಜಾನೆ 11-00 ಘಂಟೆಯವರೆಗೆ.
3) ದಿನಾಂಕ: 17-12-84ರಂದು ಮುಂಜಾನೆ 11-30 ಘಂಟೆಗೆ ಟೆಂಡರು ತೆರೆಯಲಾಗುವುದು.

(ಸಹಿ) (ಕೆ.ಎನ್.ವೀರಪ್ಪಗೌಡರು),
ಅಧ್ಯಕ್ಷರು,

(ಸಹಿ) (ಹೆಚ್.ಎಂ. ರಾಮಕೃಷ್ಣ ರೆಡ್ಡಿ),
ಕಾರ್ಯದರ್ಶಿ,

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀನಪಟಿಗೆ ಅಚ್ಚು ಕೂಟ, ಕೊಪ್ಪ.